**ಅಸಲು ದಾವಾ ಸಂ.88/2019**
ಡಿ .ಡಬ್ಲ್ಯೂ-1

ದಿನಾಂಕ 15-02-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ವಾದಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ-**

ನಾನು ಶಾಲೆ ಕಲಿತಿರುವದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಗಂಡನ ತಂದೆಯ ಹೆಸರು ದತ್ತುಬಾ ಎಂದರೆ ಸರಿ. ಅವರಿಗೆ ಶಾಮರಾವ ಮತ್ತು ಪ್ರಭಾಕರ ಎಂಬ ಇಬ್ಬರು ಮಕ್ಕಳು ಇರುತ್ತಾರೆಂದರೆ ಸರಿ. ನನಗೆ ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರ ಹೆಸರು ವಿಜಯಕಲಾ ಮತ್ತು ಲಕ್ಷ್ಮೀ ಅಂತಾ ಇರುತ್ತದೆ. ಇಬ್ಬರು ಗಂಡು ಮಕ್ಕಳು ಇದ್ದು ಅವರ ಹೆಸರು ರಾಘವೇಂದ್ರ ಮತ್ತು ಗೋಪಾಲ ಅಂತಾ ಇರುತ್ತದೆ. ಗೋಪಾಲನು ಈಗ ಮರಣ ಹೊಂದಿರುತ್ತಾನೆ. ಸದರಿ ಗೋಪಾಲನಿಗೆ 4 ನೇ ಪ್ರತಿವಾದಿ ಹೆಂಡತಿ ಇದ್ದು, ಪ್ರತಿವಾದಿ ನಂಬರ 5 ಮತ್ತು 6 ಮಕ್ಕಳು ಇರುತ್ತಾರೆಂದರೆ ಸರಿ. ಸದರಿ ರಾಘವೇಂದ್ರನಿಗೆ 1 ನೇ ವಾದಿ ಹೆಂಡತಿ ಇದ್ದು, ಪ್ರತಿವಾದಿ ನಂಬರ 2, 3 ಮತ್ತು 2 ನೇ ವಾದಿ ಮಕ್ಕಳು ಇರುತ್ತಾರೆಂದರೆ ಸರಿ. ನನ್ನ ಗಂಡನ ಸಹೋದರನಾದ ಪ್ರಭಾಕರ ಇವರ ಹೆಂಡತಿಯ ಹೆಸರು ವೃಂದಾ ಅಂತಾ ಇರುತ್ತದೆ. ಸದರಿಯವರಿಗೆ 04 ಜನ ಹೆಣ್ಣು ಮಕ್ಕಳು. ಇಬ್ಬರು ಗಂಡು ಮಕ್ಕಳು ಇದ್ದು ಅವರಲ್ಲಿ ಒಬ್ಬ ಮರಣ ಹೊಂದಿರುತ್ತಾನೆ. ಅವರ ಹೆಸರುಗಳು ಕಾಂತಶ್ರೀ, ಶೈಲಾ, ಸರಿತಾ, ಸವಿತಾ, ಮಂಜುನಾಥ, ರಾಜು. ಇವರಲ್ಲಿ ರಾಜು ಮರಣ ಹೊಂದಿರುತ್ತಾನೆ.

ದಾವಾ ಆಸ್ತಿಗಳಲ್ಲಿ ನನ್ನ ಮಾವನಾದ ದತ್ತುಬಾ ಇವರು ಅತಿಕ್ರಮಣ ಮಾಡಿಕೊಂಡು ಅದರ ಕಬ್ಜಾದಲ್ಲಿ ಇದ್ದರು ಎಂದರೆ ಸರಿಯಲ್ಲ. ಮೂಲತಃ ದಾವಾ ಆಸ್ತಿಯಲ್ಲಿ ಎರಡು ಭಾಗ ಇದ್ದು ಅವು ನನ್ನ ಗಂಡ ಮತ್ತು ಆತನ ಸಹೋದರನಾದ ಪ್ರಭಾಕರ ಇವರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿಗಳು ಇರುತ್ತವೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ